


# ಗಜಾಸುರ ಸಂಹಾರ ಮೂರ್ತಿ

ಎರಡನೆಯ ತಿರುಪತಿಯೆಂದು ಪ್ರಸಿದ್ಧಿಯಾಗಿರುವ ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿರುವ ಪುರಾತನವಾದ ವೆಂಕಟಪತಿ ಬಾವಿಯು ಎಲ್ಲರ ಕಣ್ಮನ ಸೆಳೆಯುತ್ತದೆ. ಇದನ್ನು ಮಧ್ಯಕಾಲೀನ ಕರ್ನಾಟಕ ವಾಸ್ತುಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ಮೆಟ್ಟಿಲುಗಳ ಮೂಲಕ ಬಾವಿಗೆ ಇಳಿಯುವಾಗ ಕಾಣುವ ಸುಂದರವಾದ ಕಮಾನುಗಳು, ಏತದ ಮೂಲಕ ಬಾವಿಯಿಂದ ನೀರೆತ್ತಲು ರಚಿಸಿರುವ ಆಕರ್ಷಕ ಶಿಲ್ಪಕಲೆಯಿಂದ ಕೂಡಿರುವ ಉಪ್ಪರಿಗೆ ಮತ್ತು 65 ಕಂಬಗಳಿರುವ ಮಂಟಪಗಳು ಇಲ್ಲಿನ ಆಕರ್ಷಣೆಯ ಕೇಂದ್ರಬಿಂದುಗಳಾಗಿವೆ.

ಬಾವಿಯ ನೈರುತ್ಯ ದಿಕ್ಕಿನ ಕಡೆಯಿಂದ ಮೆಟ್ಟಿಲುಗಳ ಮೂಲಕ ಇಳಿಯುವಾಗ ಎಡಭಾಗದಲ್ಲಿರುವ ಉಬ್ಬುಶಿಲ್ಪವಂತೂ ಎಲ್ಲರ ಗಮನ ಸೆಳೆಯುತ್ತದೆ. ಆನೆಯ ತಲೆಯನ್ನು ಹೊಂದಿರುವಂತಹ ರಾಕ್ಷಸನನ್ನು ಶಿವನು ಸಂಹರಿಸುವ 'ಗಜಾಸುರ ಸಂಹಾರ' ಉಬ್ಬು ಶಿಲ್ಪ ಇದಾಗಿದ್ದು, ಶಿವನಿಗೆ ಹತ್ತು ಕೈಗಳಿರುವಂತೆ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಶಿವ ತನ್ನ ಎಂಟು ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದುಕೊಂಡಿದ್ದರೆ, ಎರಡು ಕೈ ಹಾಗೂ ಕಾಲುಗಳು ನೃತ್ಯ ಮಾಡುತ್ತಿರುವ ಭಂಗಿಯಲ್ಲಿವೆ. ಶಿವ ಸಂಹರಿಸಿದ ಆನೆಯ ತಲೆಯನ್ನು ಶಿಲ್ಪದ ಬಲ ಬದಿಯಲ್ಲಿ ನೋಡಬಹುದಾಗಿದೆ. ಗಜಾಸುರ ಸಂಹಾರ ಮೂರ್ತಿಯ ಶಿಲ್ಪಗಳು ಕರ್ನಾಟಕದ ಹಲವು ದೇವಾಲಯಗಳಲ್ಲಿದ್ದರೂ, ಈ ರೀತಿಯ ಉಬ್ಬುಶಿಲ್ಪ ಇತರೆಡೆ ಕಾಣಸಿಗುವುದು ಅಪರೂಪ.

–ಜಿ. ನಾಗೇಂದ್ರ, ಕಾವೂರು, ಸಂಡೂರು





# ಕಕ್ಕೆ ಬೀಜವೆಂಬ ಚಿನ್ನದ ಪದಕ

ಮೇಲ್ನೋಟಕ್ಕೆ ಚಿನ್ನದ ಪದಕಗಳಂತೆ ಕಾಣುವ ಈ ಬಿಲ್ಲೆಗಳು ಕಕ್ಕೆ ಅಥವಾ ಸ್ವರ್ಣಪುಷ್ಪ ಎಂದು ಕರೆಯಲ್ಪಡುವ ಮರದ ಬೀಜಗಳಾಗಿವೆ. ಮಾರ್ಚ್, ಮೇ ತಿಂಗಳಲ್ಲಿ ಹಳದಿ ವರ್ಣದ ಹೂಗಳನ್ನು ಗೊಂಚಲು ಗೊಂಚಲಾಗಿ ಮೈತುಂಬಾ ಅರಳಿಸಿಕೊಂಡು ಕಕ್ಕೆ ಮರವು ಸಿಂಗರಗೊಳ್ಳುತ್ತದೆ. ಹಾಗೆಂದೇ ಆಂಗ್ಲ ಭಾಷೆಯಲ್ಲಿ ಇದಕ್ಕೆ ಗೋಲ್ಡನ್ ಷವರ್ ಟ್ರೀ ಎನ್ನುತ್ತಾರೆ. ಇದರ ಹೂವು ಥಾಯ್ಲೆಂಡ್ ದೇಶದ ರಾಷ್ಟ್ರೀಯ ಪುಷ್ಪ ಹಾಗೂ ಕೇರಳದ ರಾಜ್ಯ ಪುಷ್ಪವಾಗಿದೆ. ವೃಕ್ಷ ಬಿಡುವ ಸಿಲಿಂಡರಾಕಾರದ ಕೋಡುಗಳನ್ನು ಒಣಗಿದ ನಂತರ ಬಿಡಿಸಿದರೆ ಚಿನ್ನದ ಬಿಲ್ಲೆಗಳಂತ ಸ್ವರ್ಣ ವರ್ಣದ ಬೀಜಗಳು ಸಿಗುತ್ತವೆ. ಕಂದು ಬಣ್ಣದ ಕೋಡುಗಳು ಸುಮಾರು 2 ಅಡಿ ಉದ್ದವಿದ್ದು ಪ್ರತೀ ಕೋಡು ನೂರರಷ್ಟು ಬೀಜಗಳನ್ನು ಹೊಂದಿರುತ್ತದೆ.

ಕ್ಯಾಸಿಯಾ ಫಿಸ್ಟುಲಾ ಎಂದು ವೈಜ್ಞಾನಿಕವಾಗಿ ಗುರುತಿಸಿಕೊಂಡಿರುವ ಭಾರತ ಮೂಲದ ಸದ್ರಿ ಸಸ್ಯವನ್ನು ಅಲಂಕಾರಿಕ ಸಸ್ಯವಾಗಿ ಬೆಳೆಸುತ್ತಾರೆ. ಹೂವುಗಳು ಜೇನುನೊಣಗಳನ್ನು ಆಕರ್ಷಿಸಿ ಪರಾಗಸ್ಪರ್ಶ ಹೊಂದುತ್ತವೆ. ವಿರೇಚಕ ಹಾಗೂ ವಾತಸಂಬಂಧಿ ಚಿಕಿತ್ಸೆಗಳಿಗೆ ಆಯುರ್ವೇದ ಗಿಡಮೂಲಿಕೆಯಾಗಿಯೂ ಬೀಜಗಳನ್ನು ಬಳಸಲಾಗುತ್ತದೆ. ಮಿತ್ರರೋರ್ವರು ಮನೆಮಂದಿಯೊಂದಿಗೆ ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿರುವ ಶಿವನೇರಿ ಕೋಟೆಯ ಬುಡದಲ್ಲಿ ಈ ಬಾರಿ ಪ್ರವಾಸಾರ್ಥವಾಗಿ ತಿರುಗಾಡುತ್ತಿದ್ದಾಗ, ಇದರ ಕೋಡುಗಳನ್ನು ಕಲೆ ಹಾಕಿ ಸುಮಾರು 1 ಕೆ.ಜಿ.ಯಷ್ಟು ಬೀಜಗಳನ್ನು ಬಿಡಿಸಿಕೊಂಡರು!

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ

